**ಸರ್ಕಾರಿ ಪ್ರೌಢ ಶಾಲೆ ಬೇಗೂರು ,ಬೆಂಗಳೂರು -೬೮**

**ರೂಪಣಾತ್ಮಕ ಮೌಲ್ಯಮಾಪನ -೩** ***ಸಾಧನಾ ಪರೀಕ್ಷೆ***

**೧೦ ನೇ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು ೨೦**

**1. ಕೆಳಗಿನ ಪ್ರಶ್ನೆಗಳಿಗೆ ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ . 4*1/2=2**

೧. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

೨. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದುನಕರೆದನು ?

೩. ಕರ್ಣ ಯಾರನ್ನು ತನ್ನ ದಾತಾರ ಎಂದಿದ್ದಾನೆ ?

೪. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

**2.ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**
**4*1=4**

೧.ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?

೨. ನೆಹರೂ ಅವರು ಸರ್ ಎಂ . ವಿಶ್ವೇಶ್ವರಯ್ಯನವರ ಬಗ್ಗೆ ಏನು ಹೇಳಿದ್ದಾರೆ ?

೩. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ ?

೪.ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

**3.ಸಂದರ್ಭಾನುಸಾರ ಸ್ವಾರಸ್ಯವನ್ನು ವಿವರಿಸಿ. 1*2=2**

''ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ''

**4.ದೇವನೂರು ಮಹಾದೇವ ಅವರ ಕಾಲ ,ಸ್ಥಳ, ಕೃತಿಗಳನ್ನು ತಿಳಿಸಿ. 1*2=2**

**5. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ .1*2=2**

ಮಾರಿಗೌತಣ----------

-------------------

-----------------

-----------------

------------------

---------------- ರಾಜೀವಸಖನಾಣೆ.

**6. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ . 1*2=2**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ .

**7. ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಕೆಳಗೆ ನೀಡಿದ ಪ್ರಶ್ನೆಗಳಿಗೆ ಉತ್ತರಿಸಿ. 4*1/2 =2**

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ

೧ ಯಾವುದನ್ನು ಮೇಲೆಬ್ಬಿಸಿ ನಿಲ್ಲಿಸಬೇಕಿದೆ ?
೨.ಯಾವುದನ್ನು ಕಟ್ಟಬೇಕು ?
೩.ಮನುಜರ ನಡುವಿನ ಅಡ್ಡಗೋಡೆ ಎಂದರೆ ಏನೆಂದು ಅರ್ಥೈಸುವಿರಿ ?
೪. ಈ ನುಡಿಯಲ್ಲಿ ನಿಮಗಿಷ್ಟವಾದ ಸಾಲು ಯಾವುದು ? ಏಕೆ ?

**8.ಈ ಕೆಳಗಿನ ಪದ್ಯಭಾಗಕ್ಕೆ ಗುರು ಲಘು ಹಾಕಿ ಗಣವಿಭಾಗಿಸಿ ಛಂದಸ್ಸಿನ ಹೆಸರು ಬರೆಯಿರಿ .1*2=2**

ಭೇದವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ

**9. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. ೨*೧/೨=೧**

೧. ಸನ್ನಡತೆ ಪದದಲ್ಲಿರುವ ಸಂಧಿ -----
ಎ) ಆದೇಶ ಸಂಧಿ ಬಿ)ಜಶ್ತ್ವಸಂಧಿ ಸಿ )ಅನುನಾಸಿಕಸಂಧಿ ಡಿ )ಶ್ಚುತ್ವ ಸಂಧಿ
೨. ಶಿಕ್ಷಣವು ಸಂಜೀವಿನಿ ಇಲ್ಲಿರುವ ಅಲಂಕಾರ _______
ಎ) ಉಪಮಾ ಬಿ)ರೂಪಕ ಸಿ )ಅರ್ಥಾಂತರನ್ಯಾಸ ಡಿ) ದೃಷ್ಟಾಂತ

**10. ಮೊದಲಿನ ಎರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ. ೨*೧/೨=೧**

೧. ಸ್ಥಾನ: ತಾಣ : : ಪಟ್ಟಣ :____
೨. ದೇಶಸೇವೆ : ತತ್ಪುರುಷಸಮಾಸ : : ದೊಡ್ಡನಗರ : ____

*****************************************************